# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352-229051 www.kswu.ac.in **Fax:** 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್-105/2018-19/572 ದಿನಾಂಕ:02-06-2018

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ:- 25-05-2018 ರಂದು ಮುಂಜಾನೆ 11:00 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ:- 25-05-2018 ರಂದು ಮುಂಜಾನೆ 11:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಪ್ರತಿಗಳು:-**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ಎನ್.ಚಂದ್ರಪ್ಪ, ಡೀನರು ಶಿಕ್ಷಣ ನಿಕಾಯ. | ಸದಸ್ಯರು | 18-11-2017 | 17-11-2018 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಡಾ.ಅಶೋಕ ಇಟಗಿ | ಸದಸ್ಯರು | 07-12-2017 | 06-12-2018 |
| 8. | 1(ಎಫ್) | ಶ್ರೀ ಬಸವರಾಜ ಬಾದರ್ಲಿ | ಸದಸ್ಯರು | 07-12-2017 | 06-12-2018 |
| 9. | 1(ಎಫ್) | ಡಾ. ಇಸ್ತಾಕಅಹ್ಮದ ಹವಾಲ್ದಾರ್ | ಸದಸ್ಯರು | 07-12-2017 | 06-12-2018 |
| 10. | 1(ಎಫ್) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | | |
| 11. | 1(ಜಿ) | ಶ್ರೀಮತಿ ಶಾಹಿಸ್ತ ಎಸ್ ಜಮಾದಾರ್ | ಸದಸ್ಯರು | 14-03-2018 | 13-03-2021 |
| 12. | 1(ಜಿ) | ಡಾ.ಬೋರಮ್ಮ ಬಿ ಪೋಲಿಸ್‌ಪಾಟೀಲ | ಸದಸ್ಯರು | 14-03-2018 | 13-03-2021 |
| 13. | 1(ಜಿ) | ಡಾ.ಎಂ.ಎಸ್.ಲಮಾಣಿ | ಸದಸ್ಯರು | 14-03-2018 | 13-03-2021 |
| 14. | 1(ಜಿ) | ಶ್ರೀಮತಿ ಲಕ್ಷ್ಮೀ ಶಾಂತಗೌಡ ದೇಸಾಯಿ | ಸದಸ್ಯರು | 14-03-2018 | 13-03-2021 |
| 15. | 1(ಜಿ) | ಶ್ರೀಮತಿ ಸಾವಿತ್ರಿ ಮಜುಮದಾರ್ | ಸದಸ್ಯರು | 14-03-2018 | 13-03-2021 |
| 16. | 1(ಜಿ) | ಶ್ರೀಮತಿ. ಎಂ.ಎನ್.ಸುಮನ | ಸದಸ್ಯರು | 14-03-2018 | 13-03-2021 |
| 17. | 1(ಹೆಚ್) | ಪ್ರೊ.ಎಸ್.ಬಿ.ಕಾಮಶೆಟ್ಟಿ | ಸದಸ್ಯರು | 5-9-2017 | 4-9-2018 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು(ಮೌ) | ಸದಸ್ಯರು | 4-10-2017 | |
| 23. | ಪ್ರಕರಣ 17(2) | ಪ್ರೊ. ಎಲ್.ಆರ್.ನಾಯಕ, ಕುಲಸಚಿವರು | ಸದಸ್ಯ - ಕಾರ್ಯದರ್ಶಿ | 4-10-2017 | |

# ದಿನಾಂಕ:25-05-2018 ರಂದು ಮುಂಜಾನೆ 11:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## ಸಭೆಗೆ ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಶ್ರೀ.ಡಿ.ಎಂ.ನಿಡವಣಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 3. | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | : ಸದಸ್ಯರು |
| 4. | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | : ಸದಸ್ಯರು |
| 5. | ಶ್ರೀಮತಿ ಶಾಹಿಸ್ತ ಎಸ್ ಜಮಾದಾರ್ | : ಸದಸ್ಯರು |
| 6. | ಡಾ.ಅಶೋಕ ಇಟಗಿ | : ಸದಸ್ಯರು |
| 7. | ಡಾ.ಇಸ್ತಾಕ ಅಹ್ಮದ ಹವಾಲ್ದಾರ್ | : ಸದಸ್ಯರು |
| 8. | ಶ್ರೀ.ಬಸವರಾಜ ಬಾದರ್ಲಿ | : ಸದಸ್ಯರು |
| 9. | ಶ್ರೀ.ಎಂ.ಎಸ್.ಲಮಾಣಿ | : ಸದಸ್ಯರು |
| 10. | ಶ್ರೀಮತಿ ಲಕ್ಷ್ಮೀ ಶಾಂತಗೌಡ ದೇಸಾಯಿ | : ಸದಸ್ಯರು |
| 11. | ಶ್ರೀಮತಿ ಸಾವಿತ್ರಿ ಮಜುಮದಾರ್ | : ಸದಸ್ಯರು |
| 12. | ಶ್ರೀಮತಿ.ಎಂ.ಎನ್.ಸುಮನ್ | : ಸದಸ್ಯರು |
| 13. | ಪ್ರೊ.ಎಸ್.ಬಿ.ಕಾಮಶೆಟ್ಟಿ | : ಸದಸ್ಯರು |
| 14. | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 15. | ಪ್ರೊ.ಎಲ್.ಆರ್.ನಾಯಕ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

## ಸಭೆಗೆ ಗೈರು ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ.ಎನ್.ಚಂದ್ರಪ್ಪ | : ಸದಸ್ಯರು |
| 2. | ಡಾ.ಬೋರಮ್ಮ ಬಿ ಪೋಲಿಸ್ ಪಾಟೀಲ | : ಸದಸ್ಯರು |
| 3. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 4. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 7. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಸರಕಾರದಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000 ಪ್ರಕರಣ 28 (1)(ಜಿ) ಅನ್ವಯ ನಾಮನಿರ್ದೇಶನಗೊಂಡ ಸದಸ್ಯರಾದ ಶ್ರೀಮತಿ ಶಾಹಿಸ್ತ ಎಸ್ ಜಮಾದಾರ್, ಶ್ರೀ.ಎಂ.ಎಸ್.ಲಮಾಣಿ, ಶ್ರೀಮತಿ ಲಕ್ಷ್ಮೀ ಶಾಂತಗೌಡ ದೇಸಾಯಿ, ಶ್ರೀಮತಿ ಸಾವಿತ್ರಿ ಮಜುಮದಾರ್ ಮತ್ತು ಶ್ರೀಮತಿ ಎಂ.ಎನ್.ಸುಮನ ಅವರನ್ನು ಸ್ವಾಗತಿಸಿ ಎಲ್ಲ ಸದಸ್ಯರನ್ನು ಪರಿಚಯಿಸಿದರು. ಮುಂದುವರೆದು ಸಭೆಯಲ್ಲಿರುವ ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

## ದಿನಾಂಕ: 25–05–2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

- **ದಿನಾಂಕ: 15–03–2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.**

**ನಿರ್ಣಯ:– ದಿನಾಂಕ:15–03–2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

- **ದಿನಾಂಕ: 21–01–2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.**

**ನಿರ್ಣಯ:– ದಿನಾಂಕ:21–01–2018 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

## ದಿನಾಂಕ:15–03–2018ರಂದು ಜರುಗಿದ ಸಭೆಯಲ್ಲಿ ಮುಂದೂಡಿದ ವಿಷಯಗಳು.

# *ಸಿಂಡಿಕೇಟ್ ಐಟಂ ಸಂಖ್ಯೆ : 01*

**ವಿಷಯ:–** B.Sc/M.Sc ನರ್ಸಿಂಗ್ ಕೋರ್ಸ್‌ಗೆ ಮಂಜೂರಾಗಿರುವ 30 ಹುದ್ದೆಗಳಾದ ಪ್ರಾಂಶುಪಾಲರು, ಪ್ರಾಧ್ಯಾಪಕರು, ರೀಡರ್, ಉಪನ್ಯಾಸಕರು ಮತ್ತು ಟ್ಯೂಟರ್ ಪ್ರಸ್ತುತ ಇರುವ ಪದನಾಮ ಮಾರ್ಪಡಿಸಿ ವಿಜ್ಞಾನ ಮತ್ತು ಇತರ ಅಧ್ಯಯನ ವಿಭಾಗಗಳಿಗೆ ವರ್ಗಾಯಿಸುವ ಕುರಿತು ಸರಕಾರದ ಅನುಮತಿ ಪಡೆಯಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ಹುದ್ದೆಗಳ ವಿವರ ಈ ಕೆಳಗಿನಂತಿದೆ .

| ಕ್ರ.ಸಂ | ಮಂಜೂರಾಗಿರುವ ಹುದ್ದೆ | ಪರಿನಿಯಮಾವಳಿಯಲ್ಲಿ ಪ್ರಸ್ತುತ ಇರುವ ಪದನಾಮ | ಮಾರ್ಪಡಿಸಬೇಕಾದ ಪದನಾಮ |
|---|---|---|---|
| 1. | 01 | ಪ್ರಾಂಶುಪಾಲರು | ವಿಸ್ತರಣಾ ನಿರ್ದೇಶಕರು |
| 2. | 01 | ಪ್ರಾಧ್ಯಾಪಕರು | ಪ್ರಾಧ್ಯಾಪಕರು |
| 3. | 5+2 | ರೀಡರ್ | ಸಹ–ಪ್ರಾಧ್ಯಾಪಕರು |
| 4. | 5+2 | ಉಪನ್ಯಾಸಕರು | ಸಹಾಯಕ–ಪ್ರಾಧ್ಯಾಪಕರು |
| 5. | 14 | ಟ್ಯೂಟರ್ | ರಜೆ ರಹಿತ ಸಹಾಯಕ–ಪ್ರಾಧ್ಯಾಪಕರು |

***ನಿರ್ಣಯ:–*** **B.Sc/M.Sc ನರ್ಸಿಂಗ್ ಕೋರ್ಸ್‌ಗೆ ಮಂಜೂರಾಗಿರುವ 30 ಹುದ್ದೆಗಳಾದ ಪ್ರಾಂಶುಪಾಲರು, ಪ್ರಾಧ್ಯಾಪಕರು, ರೀಡರ್, ಉಪನ್ಯಾಸಕರು ಮತ್ತು ಟ್ಯೂಟರ್ ಪ್ರಸ್ತುತ ಇರುವ ಪದನಾಮವನ್ನು ವಿಸ್ತರಣಾ ನಿರ್ದೇಶಕರು, ಪ್ರಾಧ್ಯಾಪಕರು, ಸಹ–ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಹಾಗೂ 14 ಟ್ಯೂಟರ್ ಹುದ್ದೆಗಳನ್ನು ರಜೆ ರಹಿತ ಸಹಾಯಕ–ಪ್ರಾಧ್ಯಾಪಕರುಗಳನ್ನಾಗಿ ಮಾರ್ಪಡಿಸಲು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸಲಾಯಿತು.**

**ಮುಂದುವರೆದು ಮಂಜೂರಾಗಿರುವ 30 ಹುದ್ದೆಗಳಲ್ಲಿ ಭೌತಶಾಸ್ತ್ರಕ್ಕೆ–5, ರಸಾಯನಶಾಸ್ತ್ರ–5, ಗಣಿತಶಾಸ್ತ್ರಕ್ಕೆ–5, ಮಹಿಳಾ ಅಧ್ಯಯನ /ವಸ್ತು ಸಂಗ್ರಾಹಾಲಯಕ್ಕೆ –5 ಹಸಿರು ಮನೆಗೆ –2**

**ಹಾಗೂ ಉಡುತಡಿ ಕೇಂದ್ರಕ್ಕೆ –2, ಬೆಂಗಳೂರಿಗೆ–3, ವಿಸ್ತರಣಾ ಕೇಂದ್ರಕ್ಕೆ – 2 ಹಂಚಿ ಪ್ರಸ್ತಾವನೆಯನ್ನು ಸರಕಾರಕ್ಕೆ ಕಳುಹಿಸಲು ತೀರ್ಮಾನಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ: 02*

ಮಾನ್ಯ ಕುಲಪತಿಗಳು ಸ್ಪರ್ಶ(SPARSH)ಸಮಿತಿ ಸಲ್ಲಿಸಿರುವ ವರದಿಯನ್ನು ಸಭೆಯಲ್ಲಿ ಮಂಡಿಸಿದ್ದು, ಸದರಿ ವಿಷಯ ಕುರಿತು ಚರ್ಚಿಸಿ, ಸಂಬಂಧಪಟ್ಟ ವಿದ್ಯಾರ್ಥಿನಿಯ ವಿನಂತಿಯ ಮೇರೆಗೆ ಅವಳ ಸಂಶೋಧನ ಮಾರ್ಗದರ್ಶಕರನ್ನು ಬದಲಾಯಿಸಲು ಅನುಮೋದಿಸಲಾಯಿತು. ಹಾಗೂ ಇನ್ನಿತರೆ ವಿಷಯಗಳ ಕುರಿತು ಮುಂದಿನ ಸಭೆಯಲ್ಲಿ ಚರ್ಚಿಸಲು ಸೂಚಿಸಲಾಯಿತು. ಆದ್ದರಿಂದ ಈ ವಿಷಯವನ್ನು ಪುನ: ಮಂಡಿಸಿದೆ.

*ನಿರ್ಣಯ:–*

**1.ಸ್ಪರ್ಶ(SPARSH)ಸಮಿತಿ ಸಭೆಯ ಎಂಟು ಶಿಫಾರಸುಗಳನ್ನು ಒಪ್ಪಿಕೊಳ್ಳಲಾಯಿತು.**

**2. ಪ್ರೊ ಮಹೇಶ ಚಿಂತಾಮಣಿ ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗದ ಇವರಿಗೆ 2018–19ನೇ ಸಾಲಿನಿಂದ ಐದು ವರ್ಷದ ವರಗೆ ಆಡಳಿತಾತ್ಮಕ ಜವಾಬ್ದಾರಿಗಳಿಂದ ಹೊರಗಡೆ ಇಡಲು ತೀರ್ಮಾನಿಸಲಾಯಿತು.**

**3. ಡಾ.ನಾಗರಾಜ.ಎಂ, ಸಹಾಯಕ ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ ಇವರಿಗೆ 2018–19ನೇ ಸಾಲಿನಿಂದ ಸಂಶೋಧನಾ ಮಾರ್ಗದರ್ಶನ ಮಾಡುವುದನ್ನು ಮುಂದಿನ ಐದು ವರ್ಷದವರೆಗೆ ರದ್ದುಪಡಿಸಲು ತೀರ್ಮಾನಿಸಲಾಯಿತು.(ಸದ್ಯ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಹೊರತು ಪಡಿಸಿ)**

# *ಹೊಸ ವಿಷಯಗಳು:–*

## *ಸಿಂಡಿಕೇಟ್ ಐಟಂ ಸಂಖ್ಯೆ : 03*

ವಿಷಯ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "Uniform regulations governing admission to Post-Graduate Degree / P.G. Diploma/ Certificate Programs under Choice Based Credit System (CBCS) and Continuous Assessment Grading Pattern (CAGP)" ವಿನಿಯಮಗಳನ್ನುಅನುಮೋದಿಸಿದ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 85 ಎಂವಿವಿ 2017, ದಿನಾಂಕ:13–04–2018ರನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ "Uniform regulations governing admission to Post-Graduate Degree / P.G. Diploma/ Certificate Programs under Choice Based Credit System (CBCS) and Continuous Assessment Grading Pattern (CAGP)" ನ ವಿನಿಯಮಗಳಿಗೆ ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ದಿನಾಂಕ:26–03–2018ರಂದು ಅನುಮೋದನೆ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

*ನಿರ್ಣಯ:– ಅವಗಾಹನಿಸಲಾಯಿತು*

## *ಸಿಂಡಿಕೇಟ್ ಐಟಂ ಸಂಖ್ಯೆ : 04*

**ವಿಷಯ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "Regulations governing the Diploma in Fashion Designing (DFD)" ವಿನಿಯಮಗಳನ್ನುಅನುಮೋದಿಸಿದ ಕುರಿತು.**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 17 ಎಂವಿವಿ 2017, ದಿನಾಂಕ:13–04–2018ರನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ "Regulations governing the Diploma in Fashion Designing (DFD)" ನ ವಿನಿಯಮಗಳಿಗೆ ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ದಿನಾಂಕ:13–04–2018ರಂದು ಅನುಮೋದನೆ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಿದೆ.

***ನಿರ್ಣಯ:– ಅವಗಾಹನಿಸಲಾಯಿತು***

## *ಸಿಂಡಿಕೇಟ್ ಐಟಂ ಸಂಖ್ಯೆ : 05*

ವಿಷಯ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಬೋಧಕ ಸಿಬ್ಬಂದಿಗಳಿಗೆ ನೀಡಿದ ಆದೇಶ ಪತ್ರದಲ್ಲಿ ಚಿನ್ನಪ್ಪ ಆಯೋಗದ ವರದಿ ಉಲ್ಲೇಖವನ್ನು ರದ್ದುಪಡಿಸುವ ಕುರಿತು.

ಉಲ್ಲೇಖ: ನ್ಯಾಯಮೂರ್ತಿ ಶ್ರೀ.ಎಂ.ಪಿ.ಚಿನ್ನಪ್ಪ ಆಯೋಗದ ವರದಿ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಬೋಧಕ ಸಿಬ್ಬಂದಿಗಳ ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿನ ಲೋಪದೋಷಗಳ ಕುರಿತು ನ್ಯಾಯಮೂರ್ತಿ ಶ್ರೀ.ಎಂ.ಪಿ.ಚಿನ್ನಪ್ಪ ಆಯೋಗ ನೀಡಿರುವ ವರದಿಯಲ್ಲಿ ಬೋಧಕ ಸಿಬ್ಬಂದಿಗಳ ನೇಮಕಾತಿಯಲ್ಲಿ ಕೆಲವು ದೋಷಗಳಿದ್ದರೂ ಈ ನೇಮಕಾತಿಗಳನ್ನು ಸರ್ಕಾರ ಅನುಮೋದಿಸಿರುವುದರಿಂದ ಆಯೋಗದ ವರದಿಯ ಕುರಿತು ಯಾವುದೇ ಬಾಕಿ ವಸೂಲಾತಿಗೆ ಶಿಫಾರಸ್ಸು ಇಲ್ಲದಿರುವ ಹಿನ್ನಲೆಯಲ್ಲಿ ನ್ಯಾಯಮೂರ್ತಿ ಶ್ರೀ.ಎಂ.ಪಿ.ಚಿನ್ನಪ್ಪ ಆಯೋಗದ ವರದಿಯ ಮೇಲೆ ಕ್ರಮ ಜರುಗಿಸುವ ಉಲ್ಲೇಖವನ್ನು ಹಿಂಪಡೆದ ಬೋಧಕ ಸಿಬ್ಬಂದಿಗಳಿಗೆ ಮರು ಆದೇಶ ಪತ್ರ ನೀಡಲು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–*** **ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಬೋಧಕ ಸಿಬ್ಬಂದಿಗಳಿಗೆ ನೀಡಿದ ಆದೇಶ ಪತ್ರದಲ್ಲಿ ಚಿನ್ನಪ್ಪ ಆಯೋಗದ ವರದಿ ಉಲ್ಲೇಖವನ್ನು ರದ್ದುಪಡಿಸಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 06*

ವಿಷಯ:– ಶಿಕ್ಷಣ ಹಾಗೂ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನಾಗಿ ಪ್ರೊ. ವಿ.ವಿ.ಮಳಗಿ ಅವರು ಮುಂದುವರೆದ ಕುರಿತು.

ಉಲ್ಲೇಖ:–1. ಕಛೇರಿ ಅಧಿಸೂಚನೆ ಸಂಖ್ಯೆ: ಅಮವಿವಿ/ಆಡಳಿತ–1/ಶಿ.ವಿ.ಜೇ.ಪ/2018–19/185, ದಿ:24–4–2018.

2. ಕಛೇರಿ ಆದೇಶ ಸಂಖ್ಯೆ: ಅಮವಿವಿ/ಆಡಳಿತ–1/2017–18/191, ದಿ: 25–04–18.

3. Writ Petition No:20333/2018(S-Res) & Interim Order dt 10-05-2018

ಮೇಲಿನ ವಿಷಯಕ್ಕೆ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖ 1ರ ಕಛೇರಿ ಅಧಿಸೂಚನೆಯನ್ವಯ ಹಾಗೂ ಉಲ್ಲೇಖ 2 ರ ಕಛೇರಿ ಆದೇಶದನ್ವಯ ದಿನಾಂಕ: 25–04–2018 ರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥರ ಸಂಪೂರ್ಣ ಚಾರ್ಜನ್ನು ಪ್ರೊ. ಎನ್. ಚಂದ್ರಪ್ಪ. ಡೀನರು, ಶಿಕ್ಷಣ ನಿಕಾಯ ಇವರಿಗೆ ವಹಿಸಿಕೊಡಲಾಗಿತ್ತು. ಮುಂದೂವರೆದು ಉಲ್ಲೇಖ:03 ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು ಇವರ ಆದೇಶವು ಪ್ರೊ.ವಿ.ವಿ.ಮಳಗಿ, ಪ್ರಾಧ್ಯಾಪಕರು ಶಿಕ್ಷಣ ಅಧ್ಯಯನ ಇವರಿಗೆ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನಾಗಿ ಮುಂದುವರೆಸಲು ದಿನಾಂಕ:10–05–2018ರಂದು Interim Order ನೀಡಿದ ಪ್ರಯುಕ್ತ, ಸದರಿಯವರು ಶಿಕ್ಷಣ ಹಾಗೂ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನಾಗಿ ಮುಂದುವರಿದ್ದಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–*

1. **ಮಾನ್ಯ ಉಚ್ಚನ್ಯಾಯಾಲಯ ಬೆಂಗಳೂರು ಇವರ ಆದೇಶದ ಅನ್ವಯ ಪ್ರೊ.ವಿ.ವಿ.ಮಳಗಿ, ಪ್ರಾಧ್ಯಾಪಕರು ಶಿಕ್ಷಣ ಅಧ್ಯಯನ ಇವರಿಗೆ ಶಿಕ್ಷಣ ಅಧ್ಯಯನ ವಿಭಾಗದ ಮುಖ್ಯಸ್ಥರನ್ನಾಗಿ ಮುಂದುವರೆಸಿದ್ದಕ್ಕೆ ಒಪ್ಪಿಕೊಳ್ಳಲಾಯಿತು.**
2. **ಪ್ರೊ.ಎನ್.ಚಂದ್ರಪ್ಪ ಪ್ರಾಧ್ಯಾಪಕರು ಇವರಿಗೆ ದೈಹಿಕ ಶಿಕ್ಷಣ & ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಿ, ಮಂಡ್ಯ ಹೊರಾವರಣ ಕೇಂದ್ರದಿಂದ ಜ್ಞಾನಶಕ್ತಿ ಕ್ಯಾಂಪಸ್‌ಗೆ ವಾಪಸ್ಸು ಕರೆಸಿ ಕೊಂಡಿರುವುದಕ್ಕೂ ಅನುಮೋದನೆ ನೀಡಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 07*

ವಿಷಯ:– ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರನ್ನಾಗಿ ಪ್ರೊ. ಪಿ.ಕನ್ನನ್, ಡೀನರು ಕಲಾ ನಿಕಾಯ ಇವರನ್ನು ನೇಮಕ ಮಾಡಿರುವ ಕುರಿತು.

ಉಲ್ಲೇಖ:–1. ಕಛೇರಿ ಆದೇಶ ಸಂಖ್ಯೆ: ಅಮವಿವಿ/ಆಡಳಿತ–1/2017–18/327,ದಿ:02–02–18.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರ ಕಛೇರಿ ಆದೇಶ ಅನ್ವಯ ದಿನಾಂಕ: 20–02–2018 ರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರ ಸಂಪೂರ್ಣ ಚಾರ್ಜನ್ನು ಪ್ರೊ. ಕನ್ನನ್ ಡೀನರು, ಕಲಾ ನಿಕಾಯ ಇವರಿಗೆ ವಹಿಸಿಕೊಡಲಾಗಿದೆ. ಸದರಿ ವಿಷಯವನ್ನು ಘಟನೋತ್ತರ ಮಂಜೂರಾತಿಗಾಗಿ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:– **ಘಟನೋತ್ತರ ಅನುಮೋದನೆ ನೀಡಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 08*

**ವಿಷಯ:** 2018–19 ನೇ ಶೈಕ್ಷಣಿಕ ಸಾಲಿನ ವಾರ್ಷಿಕ ವೇಳಾ ಪಟ್ಟಿ ಹಾಗೂ ಸಂದಾಯವಾಗುವ ಶುಲ್ಕ ಸ್ನಾತಕ ಪದವಿ ಕೋರ್ಸುಗಳ ವಿದ್ಯಾರ್ಥಿನಿಯರಿಂದ ವಿಶ್ವವಿದ್ಯಾಲಯಕ್ಕೆ ಸಂದಾಯವಾಗುವ ಶುಲ್ಕದ ಬಗ್ಗೆ.

**ಉಲ್ಲೇಖ:** ಪ್ರಾಂಶುಪಾಲರು ಸಭೆಯ ದಿನಾಂಕ :11–04–2018

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಸ್ನಾತಕ ಪದವಿ ಕೋರ್ಸುಗಳಿಗೆ ಸಂಬಂಧಿಸಿದಂತೆ, ವಾರ್ಷಿಕ ವೇಳಾ ಪಟ್ಟಿ ಹಾಗೂ ಸಂದಾಯವಾಗುವ ಶುಲ್ಕ ವಿದ್ಯಾರ್ಥಿನಿಯರಿಂದ ಸಂದಾಯವಾಗುವ ಶುಲ್ಕವನ್ನು ಪ್ರತಿವರ್ಷದಂತೆ ಶೇ 10% ರಷ್ಟು ಹೆಚ್ಚಿಸಿ ನಿಗದಿಪಡಿಸಿದ್ದು, ಶುಲ್ಕದ ವಿವರ ಈ ಕೆಳಗಿನಂತಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**<u>2018-19 ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕ ಕೋರ್ಸುಗಳ ವಿಶ್ವವಿದ್ಯಾಲಯಕ್ಕೆ ಸಂದಾಯವಾಗುವ ಶುಲ್ಕದ ವಿವರ</u>**

| ಅನಂ | ವಿವರ | ಬಿ.ಎ. ಬಿಎಸ್ಸಿ. ಬಿಎಚ್.ಎಸ್ಸಿ. ಬಿಕಾಂ ಪ್ರಥಮ ಸೆಮಿಸ್ಟರ್ | ಬಿ.ಎ. ಬಿಎಸ್ಸಿ. ಬಿಎಚ್.ಎಸ್ಸಿ. ಬಿಕಾಂ ತೃತೀಯ ಮತ್ತು ಐದನೇ ಸೆಮಿಸ್ಟರ್ | ಬಬಿಎ/ಬಿಸಿಎ/ಬಿಬಿಎಂ /ಬಿ.ಎಸ್ ಡಬ್ಲ್ಯೂ& ಬಿಎಫ್‌ಟಿ ಪ್ರಥಮ ಸೆಮಿಸ್ಟರ್ | ಬಬಿಎ/ಬಿಸಿಎ/ಬಿಬಿಎಂ /ಬಿ.ಎಸ್ ಡಬ್ಲ್ಯೂ& ಬಿಎಫ್‌ಟಿ ತೃತೀಯ & ಐದನೇ ಸೆಮಿಸ್ಟರ್ |
|---|---|---|---|---|---|
| 1 | ಅರ್ಹತಾ ಅರ್ಜಿ ಶುಲ್ಕ | 65/- ರೂ | ----- | 65/- | ----- |
| 2 | **<u>ಅರ್ಹತಾ ಶುಲ್ಕ ಪ್ರಥಮ ಸೆಮಿಸ್ಟರ್‌ಗೆ ಮಾತ್ರ</u>** | ---- | ----- | ------ | ----- |
| | ಅ) ರಾಜ್ಯದೊಳಗೆ | 180/- ರೂ | ----- | 390/- ರೂ | ----- |
| | ಬ) ಹೊರ ರಾಜ್ಯ | 955/- ರೂ | ----- | 3730/- ರೂ | ----- |
| | ಕ) ಹೊರ ದೇಶದ ವಿದ್ಯಾರ್ಥಿನಿಯರಿಗೆ | 12980/- ರೂ | ----- | 25950/- ರೂ | ----- |
| 3 | ನೋಂದಣಿ ಶುಲ್ಕ ಪ್ರಥಮ ಸಮಿಸ್ಟರ್‌ಗೆ ಮಾತ್ರ | 350/- ರೂ | ----- | 570/- ರೂ | ----- |
| 4 | ಮುಂದುವರಿಕೆ ಶುಲ್ಕ ಮೂರನೇ ಮತ್ತು ಐದನೇ ಸಮಿಸ್ಟರ್‌ಗೆ ಮಾತ್ರ | ---- | 180/- ರೂ | ---- | 200/- ರೂ |
| 5 | ಕ್ರೀಡಾ ಶುಲ್ಕ ಪ್ರಥಮ, ತೃತೀಯ & ಐದನೇ ಸೆಮಿಸ್ಟರ್ | 170/- ರೂ | 170/- ರೂ | 180/- ರೂ | 180/- ರೂ |
| 6 | ವೃತ್ತಿ ಮಾರ್ಗದರ್ಶನ ಪ್ರಥಮ, ತೃತೀಯ & ಐದನೇ ಸೆಮಿಸ್ಟರ್ | 65/- ರೂ | 65/- ರೂ | 70/- ರೂ | 70/- ರೂ |
| 7 | ಕರಾಮವಿವಿ ವಿದ್ಯಾರ್ಥಿನಿಯರ ಕ್ಷೇಮ ಪಾಲನಾ ಫೀ ಪ್ರಥಮ, ತೃತೀಯ & ಐದನೇ ಸೆಮಿಸ್ಟರ್ | 65/- ರೂ | 65/- ರೂ | 70/- ರೂ | 70/- ರೂ |
| 8 | ಟೆಲಿ ಎಜುಕೇಶನ್ | 40/- ರೂ | 40/- ರೂ | 40/- ರೂ | 40/- ರೂ |
| 9 | ಕಾರ್ಪಸ್ ಫಂಡ್ (I &II Sem Only) | 145/- ರೂ | ---- | 290/- ರೂ | ---- |
| 10 | ಎನ್ ಎಸ್ ಎಸ್ ಭವನ | 50/- | ---- | 50/- | ---- |
| ರಾಜ್ಯದೊಳಗಿನ ವಿದ್ಯಾರ್ಥಿನಿಯರಿಗೆ ಒಟ್ಟು ಶುಲ್ಕ | | 1130/- ರೂ | 520/- ರೂ | 1730/- ರೂ | 560/- ರೂ |
| ಹೊರ ರಾಜ್ಯದ ವಿದ್ಯಾರ್ಥಿನಿಯರಿಗೆ ಒಟ್ಟು ಶುಲ್ಕ | | 1905/- ರೂ | --- | 5070/- ರೂ | --- |
| ಹೊರ ದೇಶದ ವಿದ್ಯಾರ್ಥಿನಿಯರಿಗೆ ಒಟ್ಟು ಶುಲ್ಕ | | 13930/- ರೂ | --- | 27290/- ರೂ | --- |

*ನಿರ್ಣಯ:–* **2018–19 ನೇ ಶೈಕ್ಷಣಿಕ ಸಾಲಿನ ವಾರ್ಷಿಕ ವೇಳಾ ಪಟ್ಟಿ ಹಾಗೂ ಎಲ್ಲಾ ಸ್ನಾತಕ ಕೋರ್ಸುಗಳ ವಿಶ್ವವಿದ್ಯಾಲಯಕ್ಕೆ ಸಂದಾಯವಾಗುವ ಶುಲ್ಕದ ಪಟ್ಟಿಯನ್ನು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 09*

ವಿಷಯ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಪರೀಕ್ಷಾ ವಿಭಾಗಕ್ಕೆ ಸ್ನಾತಕ, ಸ್ನಾತಕೋತ್ತರ

ಕೋರ್ಸುಗಳ ಅಂಕಪಟ್ಟಿ, ಪಾಸಿಂಗ ಸರ್ಟಿಫಿಕೇಟ ಮತ್ತು ರ್‍ಯಾಂಕ ಸರ್ಟಿಫಿಕೇಟಗಳಿಗಾಗಿ ಇ-ಪ್ರಕ್ಯೂರಮೆಂಟ ಮುಖಾಂತರ ಟೆಂಡರ ಖರೀದಿ ಬಗ್ಗೆ.

ಉಲ್ಲೇಖ:1) ಅಲ್ಪಾವಧಿ ಟೆಂಡರ ಅಧಿಸೂಚನೆ ಸಂಖ್ಯೆ:AMWU/Exam/MC&Cert/Tender/2017-18/5676. ದಿನಾಂಕ:10-01-2018.

2) ತಿದ್ದುಪಡಿ ಅಧಿಸೂಚನೆ ಸಂಖ್ಯೆ:AMWU/Exam/MC&Cert/Tender/2017-18/5919. ದಿನಾಂಕ:27-01-2018.

3) ಟೆಕ್ನಿಕಲ್ ಬಿಡ್ ಸಭೆ ದಿನಾಂಕ:13-03-2018.

4) ಫೈನಾನ್ಸಿಯಲ್ ಬಿಡ್ ದಿನಾಂಕ:23-03-2018.

5) ಪ್ರವೀಣ ಕುಮಾರ ಇವರ ದೂರು ಪತ್ರ ದಿನಾಂಕ:24-03-2018.

6) Tender Scrutiny Committee Meeting dated:25-03-2018.

7) Maddala Industries, Guntur ಇವರಿಗೆ ಬರೆದ ಕಛೇರಿ ಪತ್ರ ಸಂಖ್ಯೆ:ಅಮವಿವಿ/ಪರೀಕ್ಷಾ/ಟೆಂಡರ/6838, ದಿನಾಂಕ:26-03-2018.

8) Work Order letter No:ಅಮವಿವಿ/ಪರೀಕ್ಷಾ/ಅಮಿಉಪ/ಟೆಂಡರ/2017-18/6839. ದಿನಾಂಕ:26-03-2018.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಪರೀಕ್ಷಾ ವಿಭಾಗಕ್ಕೆ ಸ್ನಾತಕ, ಸ್ನಾತಕೋತ್ತರ ಕೋರ್ಸುಗಳ ಅಂಕಪಟ್ಟಿ, ಪಾಸಿಂಗ ಸರ್ಟಿಫಿಕೇಟ್ ಮತ್ತು ರ್‍ಯಾಂಕ ಸರ್ಟಿಫಿಕೇಟಗಳಿಗಾಗಿ ಇ-ಪ್ರಕ್ಯೂರಮೆಂಟ ಮುಖಾಂತರ ಉಲ್ಲೇಖಿತ(1)&(2)ರ ಅಧಿಸೂಚನೆ ಮೂಲಕ ಟೆಂಡರ ಕರೆಯಲಾಗಿತ್ತು. ದಿನಾಂಕ:13-03-2018 ರಂದು ಜರುಗಿದ ಟೆಕ್ನಿಕಲ್ ಬಿಡ್ ಸಭೆಯಲ್ಲಿ 1) Maddala Industries, Guntur 2) Mehra Computer System Limited Bangalore ಈ ಎರಡು ಮಳಿಗೆದಾರರು ಅರ್ಹತೆ ಹೊಂದಿರುತ್ತಾರೆ. ಹಾಗೂ ದಿನಾಂಕ: 23-03-2018 ನಡೆದ ಫೈನಾನ್ಸಿಯಲ್ ಬಿಡ್‌ನಲ್ಲಿ ದರಗಳ ವಿವರ ಈ ಕೆಳಗಿನಂತಿದೆ.

1) Maddala Industries, Guntur - Rs.24.75/- sheet – L1

2) Mehra Computer System Limited Bangalore - Rs.30.67/- Sheet- L2

ದಿನಾಂಕ:24-03-2018 ರಂದು Maddala Industries, Guntur ಇವರ ಬಗ್ಗೆ ಉಲ್ಲೇಖಿತ(5) ಪತ್ರ ಬಂದಿದ್ದು, ಸದರಿ ಪತ್ರದಲ್ಲಿ Maddala Industries, Guntur ಇದರ ಹೆಸರು ಈಗಾಗಲೇ ಲೋಕಾಯುಕ್ತ ಪ್ರಕರಣ ಸಂಖ್ಯೆ: COMPT/UPLOK/BGM/3279/2014/LOK/INV(T)/LA-150/2014/AEE-1, dated:01-06-2015 ದಲ್ಲಿರುತ್ತದೆ. ಹಾಗೂ ಸದರಿ ಪ್ರಕರಣವು ಮಹಿಳಾ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:25-03-2018 ರಂದು ಜರುಗಿದ ಉಲ್ಲೇಖಿತ(6)ರ Tender Scrutiny Committee ಸಭೆಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ Maddala Industries, Guntur ಇವರು ಫೈನಾನ್ಸಿಯಲ್ ಬಿಡ್‌ನಲ್ಲಿ L1 ಸ್ಥಾನ ಪಡೆದಿದ್ದು, ಆದರೆ ಸದರಿ ಕಂಪನಿಯ ಹೆಸರು ಲೋಕಾಯುಕ್ತ ಪ್ರಕರಣದಲ್ಲಿ ಇದನ್ನು ಕಂಡು ಬಂದಿದ್ದರಿಂದ ಹಾಗೂ ಪ್ರಕರಣವು ಇನ್ನು ಚಾಲನೆಯಲ್ಲಿರುವುದರಿಂದ ಇವರನ್ನು ಹೊರತು ಪಡಿಸಿ L2 ಸ್ಥಾನ ಪಡೆದ Mehra Computer System Limited Bangalore ಇವರಿಗೆ Negotiation ಕ್ಕೆ ಕರೆಯಲು ತೀರ್ಮಾನಿಸಲಾಗಿರುತ್ತದೆ.

Tender Scrutiny Committee ಸಭೆಯ ನಿರ್ಣಯದ ಪ್ರಕಾರ Maddala Industries, Guntur ಇವರಿಗೆ ಉಲ್ಲೇಖಿತ(7)ರ ಪತ್ರ ಬರೆದು ತಿಳಿಸಲಾಗಿದೆ. ಹಾಗೂ Mehra Computer System Limited Bangalore ಇವರೊಂದಿಗೆ Negotiation ಮಾಡಿ ದರವನ್ನು ರೂ.30.67 ದಿಂದ ಕಡಿಮೆ ಮಾಡಿ ರೂ.28/-ಗಳಿಗೆ ನಿಗದಿಪಡಿಸಲಾಗಿದೆ. ಸದರಿಯವರು ಇದಕ್ಕೆ ಒಪ್ಪಿರುತ್ತಾರೆ. ಆದ್ದರಿಂದ Mehra Computer System Limited Bangalore ಇವರಿಗೆ ಉಲ್ಲೇಖಿತ(8)ರ Tender Work order ನೀಡಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:-* ವಿಶ್ವವಿದ್ಯಾನಿಲಯ ಪರೀಕ್ಷಾ ವಿಭಾಗಕ್ಕೆ ಸ್ನಾತಕ, ಸ್ನಾತಕೋತ್ತರ ಕೋರ್ಸುಗಳ ಅಂಕಪಟ್ಟಿ, ಪಾಸಿಂಗ ಸರ್ಟಿಫಿಕೇಟ್ ಮತ್ತು ರ್‍ಯಾಂಕ Tender Work order Mehra Computer System Limited Bangalore ಇವರಿಗೆ ನೀಡಿದ್ದಕ್ಕೆ ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 10*

ವಿಷಯ: ಶ್ರೀಮತಿ ಪಾರ್ವತಿ ಈಶ್ವರಚಂದ್ರ ಚಿಂತಾಮಣಿ ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು

ಡಾ. ಮಹೇಶ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ, ರವರು ಎಂ.ಎ ಕನ್ನಡ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರಥಮ ಪ್ರಯತ್ನದಲ್ಲಿ ಪಾಸಾಗುವ ವಿದ್ಯಾರ್ಥಿನಿಗೆ **ಶ್ರೀಮತಿ ಪಾರ್ವತಿ ಈಶ್ವರಚಂದ್ರ ಚಿಂತಾಮಣಿ** ಇವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/- ಸಿಂಡಿಕೇಟ್ ಬ್ಯಾಂಕ್ ಚಲನ್ ಸಂಖ್ಯೆ 39 ದಿನಾಂಕ: 06-04-2018 ರ ಪ್ರಕಾರ ನೀಡಿರುತ್ತಾರೆ, ಕಾರಣ ಜೂನ್ 2018 ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

*ನಿರ್ಣಯ:-* **2018-19ನೇ ಸಾಲಿನಿಂದ ಎಂ.ಎ ಕನ್ನಡ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರಥಮ ಪ್ರಯತ್ನದಲ್ಲಿ ಪಾಸಾಗುವ ವಿದ್ಯಾರ್ಥಿನಿಗೆ ಶ್ರೀಮತಿ ಪಾರ್ವತಿ ಈಶ್ವರಚಂದ್ರ ಚಿಂತಾಮಣಿ ಇವರ ಹೆಸರಿನಿಂದ ಚಿನ್ನದ ಪದಕ ನೀಡಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 11*

ವಿಷಯ: ದಿನಾಂಕ:19-03-2018ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-* **ಸುದೀರ್ಘ ಚರ್ಚಿಸಿ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು,.**

## *ಸಿಂಡಿಕೇಟ್ ಐಟಂ ಸಂಖ್ಯೆ : 12*

ವಿಷಯ: ದಿನಾಂಕ:20-03-2018ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-* **ಸುದೀರ್ಘ ಚರ್ಚಿಸಿ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು,.**

## *ಸಿಂಡಿಕೇಟ್ ಐಟಂ ಸಂಖ್ಯೆ : 13*

ವಿಷಯ: ದಿನಾಂಕ:16-05-2018ರಂದು ಜರುಗಿದ ಕರಡು ಪರಿನಿಯಮಾವಳಿ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:- ಈ ವಿಷಯವನ್ನು ಕೈಬಿಡಲಾಯಿತು.*

## *ಸಿಂಡಿಕೇಟ್ ಪುರವಣಿ ಸಂಖ್ಯೆ : 01*

ವಿಷಯ: ಶ್ರೀಮತಿ ರೋಹಿಣಿ ಹಿರೇಮಠ, ಆರೋಗ್ಯ ಸಹಾಯಕಿ, ಇವರ ಗೌರವಧನ ಹೆಚ್ಚಿಸುವ

ಕುರಿತು.

ಉಲ್ಲೇಖ:- ಶ್ರೀಮತಿ ರೋಹಿಣಿ ಹಿರೇಮಠ, ಆರೋಗ್ಯ ಸಹಾಯಕಿ ಇವರ ಮನವಿ ಪತ್ರ ದಿನಾಂಕ:20-09-2017

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಸಹಾಯಕಿಯಾಗಿ ಶ್ರೀಮತಿ ರೋಹಿಣಿ ಹಿರೇಮಠ ಇವರು ಪ್ರಸ್ತುತ ಪಡೆಯುತ್ತಿರುವ ವೇತನ ರೂ.7190/- ಗಳಾಗಿದ್ದು, ಸದರಿಯವರು ಜೀವನ ನಿರ್ವಹಣೆಗೆ ಕಷ್ಟವೆಂದು ತಿಳಿಸಿ ಗೌರವಧನ ಹೆಚ್ಚಿಸುವ ಕುರಿತು ವಿನಂತಿಸಿದ್ದಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಶ್ರೀಮತಿ ರೋಹಿಣಿ ಹಿರೇಮಠ, ಆರೋಗ್ಯ ಸಹಾಯಕಿ, ಇವರಿಗೆ ದಿನಾಂಕ: 26-05-2018 ರಿಂದ ಅನ್ವಯಿಸುವಂತೆ ಪ್ರತಿ ತಿಂಗಳಿಗೆ ರೂ.500/- ಗೌರವಧನ ಹೆಚ್ಚಿಸಲು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

ವಿಷಯ: ಡಾ.ರಮೇಶ.ಕೆ, ಸಹ-ಪ್ರಾಧ್ಯಾಪಕರು, ಗಣಕ ಅಧ್ಯಯನ ವಿಭಾಗದ ಇವರಿಗೆ ವಿಶ್ವವಿದ್ಯಾನಿಲಯದ ಜ್ಞಾನ ಶಕ್ತಿ ಆವರಣಕ್ಕೆ ಹಾಜರಾಗಿರುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಡಾ.ರಮೇಶ.ಕೆ, ಸಹ-ಪ್ರಾಧ್ಯಾಪಕರು, ಗಣಕ ಅಧ್ಯಯನ ವಿಭಾಗ ಇವರು ದಿನಾಂಕ:19-02-2018ರಿಂದ 18-05-2018ರವರೆಗೆ Post Doctoral Research Fellowship ಗೆ University of Malta, Malta (Europe) ಗೆ ಹೋಗಿದ್ದ ಹಿನ್ನೆಲೆಯಲ್ಲಿ ಪ್ರೊ.ಮಹೇಶ ಚಿಂತಾಮಣಿ, ಮುಖ್ಯಸ್ಥರು ಕನ್ನಡ ಅಧ್ಯಯನ ವಿಭಾಗ ಇವರನ್ನು ದಿನಾಂಕ:17-02-2018ರಿಂದ ಮುಂದಿನ ಆದೇಶದ ವರೆಗೆ ಸಿಂಧನೂರು ಸ್ನಾತಕೋತ್ತರ ಅಧ್ಯಯನ ಕೇಂದ್ರದ ವಿಶೇಷಾಧಿಕಾರಿಯಾಗಿ ನೇಮಕ ಮಾಡಲಾಗಿದೆ.

ಮುಂದುವರೆದು ಡಾ.ರಮೇಶ.ಕೆ, ಸಹ-ಪ್ರಾಧ್ಯಾಪಕರು, ಗಣಕ ಅಧ್ಯಯನ ವಿಭಾಗ ಅವರು ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಕ್ಯಾಂಪಸ್‌ಗೆ ಹಾಜರಾಗಿದ್ದನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಡಾ.ರಮೇಶ.ಕೆ, ಸಹ-ಪ್ರಾಧ್ಯಾಪಕರು, ಗಣಕ ಅಧ್ಯಯನ ವಿಭಾಗ ಅವರು ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಕ್ಯಾಂಪಸ್‌ಗೆ ಹಾಜರಾಗಿದ್ದನ್ನು ಒಪ್ಪಿಕೊಳ್ಳಲಾಯಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

ವಿಷಯ: ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಸಂದರ್ಶನ ದಿನಾಂಕ:23-05-2018 & 24-05-2018ರಂದು ಜರುಗಿದ್ದು ಸದರಿ ನೇಮಕಾತಿ ಆಯ್ಕೆ ಸಮಿತಿ(BOA) ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಸಂಬಂಧಿಸಿದಂತೆ ಈ ಕೆಳಗೆ ನಮೂದಿಸಿದ ವಿವಿಧ ವಿಷಯಗಳ ಆಯ್ಕೆ ಸಮಿತಿ ಶಿಫಾರಸುಗಳನ್ನು ಒಪ್ಪಿಕೊಳ್ಳಲಾಗಿದ್ದು, ನೇಮಕಾತಿ ಆದೇಶ ನೀಡಲು ಅನುಮತಿಸಿದೆ ಹಾಗೂ ಕಾಯ್ದಿರಿಸಿದ ಪಟ್ಟಿಗೂ ಒಪ್ಪಿಗೆ ನೀಡಲಾಗಿದೆ. ಇದಕ್ಕೆ ಸಿಂಡಿಕೇಟ್ ಸಭೆಯು ಏಕಮತದಿಂದ ಒಪ್ಪಿಗೆ ನೀಡಿತು.**

## ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ

| ಕ್ರ.ಸಂ | ವಿವಿಧ ವಿಷಯಗಳ ಆಯ್ಕೆ ಸಮಿತಿ | ಸಭೆ ಜರುಗಿದ ದಿನಾಂಕ | ಆಯ್ಕೆಯಾದ ಅಭ್ಯರ್ಥಿಯ ಹೆಸರು | ವರ್ಗ |
|---|---|---|---|---|
| 1. | ಇಂಗ್ಲೀಷ | 23–05–2018 | Akshay Yardi | GM(others) |
| 2. | ಹಿಂದಿ | 23–05–2018 | Amarnath Prajapati | GM(others) |
| | | | Rathod Gulab Soma | SC(others) |
| 3. | ವಾಣಿಜ್ಯಶಾಸ್ತ್ರ | 23–05–2018 | Ganesh.S.R | IIIA(others) |
| 4. | ವ್ಯವಹಾರ & ನಿರ್ವಹನೆ(ಎಂಬಿಎ) | 23–05–2018 | Chandrasheakar M Matapati | GM(others) |
| 5. | ಶಿಕ್ಷಣ(ಎಂ.ಎಡ್) | 23–05–2018 | Ganiger Bharati | GM(others) |
| 6. | ಶಿಕ್ಷಣ(ಬಿ.ಎಡ್) | 23–05–2018 | Prakash Badiger | IIA(others) |
| 7. | ದೈಹಿಕಶಿಕ್ಷಣ(ಬಿಪಿ.ಎಡ್) | 23–05–2018 | Ashiwini.K.N | GM(Rural) |
| | | | Kiran.G.N | IIA(others) |
| 8. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | 24–05–2018 | Tahmeena Nigarsultana | GM(others) |
| | | | Sandeep | ST(others) |
| 9. | ಆಹಾರ ಸಂಸ್ಕಾರಣೆ | 24–05–2018 | Savita Hulamani | GM(others) |
| | | | Nataraj A Durgannavar | ST(others) |
| | | | Savita.Y.S | SC(others) |
| 10. | ಜೈವಿಕ ಮಾಹಿತಿ ತಂತ್ರಜ್ಞಾನ | 24–05–2018 | JOY | GM(others) |
| 11. | ಅರ್ಥಶಾಸ್ತ್ರ | 24–05–2018 | Suresh.K.P | ST(others) |
| 12. | ಸಮಾಜಕಾರ್ಯ | 24–05–2018 | Kamble Kalvati Housabai | GM(others) |
| 13. | ಗಣಕವಿಜ್ಞಾನ | 24–05–2018 | Bhusnurmath Rohini Andanayya | GM(others) |

## ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿ

| ಕ್ರ.ಸಂ | ವಿವಿಧ ವಿಷಯಗಳ ಆಯ್ಕೆ ಸಮಿತಿ | ಸಭೆ ಜರುಗಿದ ದಿನಾಂಕ | ಆಯ್ಕೆಯಾದ ಅಭ್ಯರ್ಥಿಯ ಹೆಸರು | ವರ್ಗ |
|---|---|---|---|---|
| 1. | ಇಂಗ್ಲೀಷ | 23–05–2018 | Manjumath Hiremath | GM |
| | | | Shasikant Kannur | GM |
| 2. | ಹಿಂದಿ | 23–05–2018 | Sunagar Mahadevi V | GM |
| | | | Renu Yadav | GM |
| | | | Shankar | SC |
| | | | Laxmidevi | SC |
| 3. | ವಾಣಿಜ್ಯಶಾಸ್ತ್ರ | 23–05–2018 | Sanjeevkumar | GM |
| 4. | ವ್ಯವಹಾರ & ನಿರ್ವಹನೆ(ಎಂಬಿಎ) | 23–05–2018 | P.M.Shivaprasad | GM |
| 5. | ಶಿಕ್ಷಣ(ಎಂ.ಎಡ್) | 23–05–2018 | Jyoti Pattanashetti | GM |
| | | | Jayashri Reddy | GM |
| 6. | ಶಿಕ್ಷಣ(ಬಿ.ಎಡ್) | 23–05–2018 | Sajjan.S.D | IIA |
| 7. | ದೈಹಿಕಶಿಕ್ಷಣ(ಬಿಪಿ.ಎಡ್) | 23–05–2018 | Kiran.G.N | GM(Rural) |
| | | | Kusuma Shamanur | |

| | | | | |
|---|---|---|---|---|
| | | | Chetan Ram | |
| 8. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | 24–05–2018 | Abhilasha R | GM |
| | | | -- | ST |
| 9. | ಆಹಾರ ಸಂಸ್ಕಾರಣೆ | 24–05–2018 | Deshmukh Priyadarshini | GM |
| | | | Nataraj A Durgannavar | GM |
| | | | Phakkeramma P Murgod | ST |
| | | | Jannifer Salam | SC |
| 10. | ಜೈವಿಕ ಮಾಹಿತಿ ತಂತ್ರಜ್ಞಾನ | 24–05–2018 | Gollapalli Pavan | GM |
| 11. | ಅರ್ಥಶಾಸ್ತ್ರ | 24–05–2018 | Balaji | ST |
| 12. | ಸಮಾಜಕಾರ್ಯ | 24–05–2018 | Rasmirani | GM |
| 13. | ಗಣಕವಿಜ್ಞಾನ | 24–05–2018 | -- | GM |

**ಕುಲಸಚಿವರು ಪ್ರೊ.ಎಲ್.ಆರ್.ನಾಯಕ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ